# ಆಹಾ ಸುದ್ದಿ!

★ ಸಸಿತೋಟ

ಇಟಲಿಯಲ್ಲಿ ಅಮೆರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮುಖವಾಡ ತೊಟ್ಟು ಎಟಿಎಂನಿಂದ ನಗದು ದೋಚುತ್ತಿದ್ದ ಇಬ್ಬರು ಸಹೋದರರು ಪೊಲೀಸ್ ಬಲೆಗೆ ಸಿಕ್ಕಿಬಿದ್ದಿದ್ದಾರಂತೆ. ಈ ತಂತ್ರ ವಿಫಲ ವಾಗಿದ್ದು ಹೇಗೆ ಎಂದು ಸಹೋದರರು ಜೈಲಿನಲ್ಲಿ ತಲೆ ಕೆಡಿಸಿಕೊಳ್ಳುತ್ತ ಕೂತಿರಬಹುದು. ಒಬ್ಬ ಟ್ರಂಪ್ ಮುಖವಾಡ, ಇನ್ನೊಬ್ಬ ರಷ್ಯಾ ಅಧ್ಯಕ್ಷರ ಮುಖವಾಡ ತೊಟ್ಟಿದ್ದರೆ ಪೊಲೀಸ್‌ಗೆ ಅನುಮಾನ ಬರುತ್ತಿರಲಿಲ್ಲ.



ಕಾಂಬೋಡಿಯಾದಲ್ಲಿ ಈ ಐದು ತಿಂಗಳ ಕರು 74ರ ವೃದ್ಧೆ ಹ್ಯಾಂಗ್ ಎಂಬಾಕೆಯ ಪತಿಯಂತೆ. ತನ್ನ ಗಂಡ ಸತ್ತು ಈ ಕರುವಿನ ರೂಪದಲ್ಲಿ ಪುನರ್ಜನ್ಮ ಪಡೆದಿದ್ದಾನೆ ಎಂಬುದು ಆಕೆಯ ನಂಬಿಗೆಯಂತೆ. ಪುಣ್ಯ ಮಾಡಿದ್ದಳು ಹ್ಯಾಂಗ್, ಹಸುವಿನ ಕರು ಬದಲು ಹುಲಿಯ ಮರಿಯಾಗಿ ಹುಟ್ಟಿದ್ದರೆ ಹುಲಿ ಪುಣ್ಯ ಮಾಡಿರುತ್ತಿತ್ತು.



ನ್ಯೂಯಾರ್ಕ್‌ನಲ್ಲಿ ಈ ಇಬ್ಬರು ಧ್ಯಾನ ಮಾಡುತ್ತಿರುವ ವಾಹನ 'ಕಾಮ್ ಸಿಟಿ' ಅಂದರೆ ಪ್ರಶಾಂತ ನಗರವಂತೆ. ಅಲ್ಲಲ್ಲಿ ಸಂಚರಿಸುವ ಇದರೊಳಗೆ ಹೊಕ್ಕ ಜನ ಶಾಂತಿಯನ್ನು ಖರೀದಿಸುತ್ತಿದ್ದಾರಂತೆ. ನೀವೂ ನ್ಯೂಯಾರ್ಕ್‌ಗೆ ಹೋದರೆ ಪ್ರಶಾಂತ ನಗರಕ್ಕೆ ತೆರಳಿ ಶಾಂತಿಯನ್ನು ಷಾಪಿಂಗ್ ಮಾಡಿ ಬರಬಹುದು.



ಈಕೆ ಕೆನಡಾದ 88ರ ಅಜ್ಜಿ ಹೊಲ್ಲೊ. 'ಕ್ರೇಜಿ ಗ್ರ್ಯಾನಿ' ಎಂದೇ ನೆರೆಹೊರೆಯಲ್ಲಿ ಹೆಸರಾದ ಈಕೆ ಈಗ ಪ್ಯಾರಾಶೂಟ್‌ನಿಂದ ಜಿಗಿದು ಜನಪ್ರಿಯಳಾಗಿದ್ದಾಳೆ. ಮುಂದಿನ ಸಾಹಸ ರೇಸ್ ಕಾರ್ ಚಲಾಯಿಸುವುದಂತೆ.



ಕ್ಯಾಲಿಫೋರ್ನಿಯಾದ ವಿಮಾನ ನಿಲ್ದಾಣದಲ್ಲಿ ಆಲೂ ಚಿಪ್ಸ್ ಡಬ್ಬಿಯಲ್ಲಿ ಈ ಕಾಳಿಂಗ ಸರ್ಪವನ್ನು ಅಡಗಿಸಿಟ್ಟು ಸಾಗಿಸಲಾಗುತ್ತಿತ್ತು. ಒಬ್ಬಾತ ಜತನದಿಂದ ಡಬ್ಬಿಯನ್ನು ಹಿಡಿದುಕೊಂಡು ಹೋಗುತ್ತಿರುವುದನ್ನು ಕಂಡ ಸಿಬ್ಬಂದಿ ಪರಿಶೀಲಿಸಿದಾಗ ಹೂರಣ ಹೊರಬಿತ್ತು. ಇಲ್ಲೇನಾದರೂ ಈ ಡಬ್ಬಿ ಬಿದ್ದಿದ್ದರೆ ಸಿಬ್ಬಂದಿಯ ಅಥವಾ ಸಹಪ್ರಯಾಣಿಕರ ಕೈಗೆ ಸಿಕ್ಕಿ ಚಿಪ್ಸ್ ಬದಲು ಕಾಳಿಂಗನ ಹಲ್ಲಿನ ರುಚಿ ನೋಡಬೇಕಿತ್ತು.

ಕೆನಡಾದಲ್ಲಿ ಲಾಮ ಪ್ರಾಣಿಯ ನೃತ್ಯದ ತರಗತಿ ಶುರುವಾಗಿದೆಯಂತೆ. ಹಿಪ್‌ಹಾಪ್ ನೃತ್ಯವನ್ನಲ್ಲದೆ ವಿವಿಧ ರೀತಿಯ ವ್ಯಾಯಾಮದ ಕಸರತ್ತು ಕೂಡಾ ಮಾಡಬಹುದಂತೆ. ಹೇಳಿಕೊಡುವವರು ಮನುಷ್ಯರೇ. ಕೊನೆಯಲ್ಲಿ ಲಾಮಗಳಿಗೆ ತಿನಿಸು ತಿನ್ನಿಸಿ ಅದರ ಜೊತೆ ಸೆಲ್ಫಿ ತೆಗೆದುಕೊಳ್ಳಬಹುದಂತೆ. ಶುಲ್ಕ ಭರ್ತಿ ಮಾಡಿದ ಮೇಲೆ ತಲೆ ಕೆಡಿಸಿಕೊಳ್ಳಬಹುದು– ಇದಕ್ಕಾಕೆ ಲಾಮ ನೃತ್ಯ ಎಂಬ ಹೆಸರಿಟ್ಟರು ಎಂದು.